ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ | VIJAYAVANI « BENGALURU

ಬುಧವಾರ 21 ಡಿಸೆಂಬರ್ 2016 | 21 DECEMBER 2016

# ರೈತರಲ್ಲಿ ಆತ್ಮವಿಶ್ವಾಸ ಮೂಡಿಸಲು ಯೋಜನ

## ಕೃಷಿಕರ ಆದಾಯ-ಕಲ್ಯಾಣ ವೃದ್ಧಿ ಕಾರ್ಯಕ್ರಮ | ಕೊಪ್ಪಾ, ಹುಲ್‌ಕಟ್ಟೆಯಲ್ಲಿ ಪ್ರಾಯೋಗಿಕ ಅನುಷ್ಠಾ

■ ವಿಜಯವಾಣಿ ಸುದ್ದಿಜಾಲ ತುಮಕೂರು

ತೀವ್ರ ಸಂಕಷ್ಟದಲ್ಲಿರುವ ತೆಂಗು ಬೆಳೆಗಾರರಿಗೆ ನೆರವಾಗಲು ಮುಂದಾಗಿರುವ ಕೃಷಿ ಬೆಲೆ ಆಯೋಗ 'ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ' ಕಾರ್ಯಕ್ರಮವನ್ನು ತಿಪಟೂರು ತಾಲೂಕು ಕೊಪ್ಪಾ ಮತ್ತು ಹುಲ್‌ಕಟ್ಟೆ ಗ್ರಾಮದ 400 ಎಕರೆ ಪ್ರದೇಶದಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನ ಮಾಡಲು ಪೂರ್ವಭಾವಿ ಸಭೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್‌ಕಮ್ಮರಡಿ ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಕೆ.ಪಿ.ಮೋಹನ್ ರಾಜ್ ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳ ಜತೆ ಚರ್ಚಿಸಲಾಯಿತು.

ಕೃಷಿಯಿಂದ ವಿಮುಖರಾಗುತ್ತಿರುವ ಹಳ್ಳಿಗಳ ಯುವಕರನ್ನು ಕೃಷಿಯಲ್ಲಿ ತೊಡಗಿಕೊಳ್ಳುವಂತೆ ಮಾಡಬೇಕಿದೆ. ಈ ನಿಟ್ಟಿನಲ್ಲಿ ಕೃಷಿಯನ್ನು ಲಾಭದಾಯಕವಾಗಿಸುವುದು ಹಾಗೂ ಭವಿಷ್ಯ ರೂಪಿಸುವ ಅಗತ್ಯವಿದ್ದು, ರಾಜ್ಯದ ಎಂಟು ಜಿಲ್ಲೆಗಳಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತಿದ್ದು, ತಿಪಟೂರು ತಾಲೂಕಿನ ಎರಡು ಪುಟ್ಟಹಳ್ಳಿಗಳಲ್ಲಿ ಕಾರ್ಯಕ್ರಮ ಅನುಷ್ಠಾನವಾಗಬೇಕಿದೆ ಎಂದು ಪ್ರಕಾಶ್‌ಕಮ್ಮರಡಿ ಮಾಹಿತಿ ನೀಡಿದರು.

ರೈತರಿಗಾಗಿ ಸರ್ಕಾರ ಸಾಕಷ್ಟು ಕಾರ್ಯಕ್ರಮ ರೂಪಿಸಿದ್ದು, ಅದರ ಅನುಷ್ಠಾನದಲ್ಲಿ ಯಶಸ್ಸು ಅಷ್ಟಕಷ್ಟೇ. ಹಾಗಾಗಿ, 'ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ' ಕಾರ್ಯಕ್ರಮಕ್ಕೆ ಎಲ್ಲ ಸಮಾನ ಮನಸ್ಕ ಇಲಾಖೆಗಳು ಸಹಕಾರ ನೀಡಬೇಕು. ಕೃಷಿ ಇಲಾಖೆ ಜಂಟಿ ನಿರ್ದೇಶಕರು ನೋಡೆಲ್ ಅಧಿಕಾರಿಯಾಗಿದ್ದು, ಜಿಲ್ಲಾಧಿಕಾರಿ ಮಾರ್ಗದರ್ಶನದಲ್ಲಿ ಅನುಷ್ಠಾನವಾಗಬೇಕು ಎಂದರು. ಕಾರ್ಯಕ್ರಮ ಅನುಷ್ಠಾನಕ್ಕೆ ಪ್ರಾಯೋಗಿಕವಾಗಿ ಆಯ್ಕೆ ಮಾಡಿಕೊಂಡಿರುವ ತಿಪಟೂರು ತಾಲೂಕಿನ ಕೊಪ್ಪಾ ಮತ್ತು ಹುಲ್‌ಕಟ್ಟೆ ಗ್ರಾಮದಲ್ಲಿ 150 ಕುಟುಂಬಗಳಿವೆ. 380 ಎಕರೆ ಕೃಷಿ ಭೂಮಿ, ಶೇ.90 ನೀರಾವರಿ ಸೌಲಭ್ಯವಿದೆ. ಇಂತಹ ಗ್ರಾಮದಲ್ಲಿ ಯಾವ ಕಾರ್ಯಕ್ರಮ ರೂಪಿಸಬಹುದು ಎಂದು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು.

ವಿಜಯವಾಣಿ ಚಿತ್ರ



ತುಮಕೂರಿನಲ್ಲಿ ರಾಜ್ಯ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್‌ಕಮ್ಮರಡಿ ಅಧ್ಯಕ್ಷತೆಯಲ್ಲಿ 'ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ' ಕಾರ್ಯಕ್ರಮದ ಪೂರ್ವಭಾವಿ ಸಭೆ ನಡೆಯಿತು. ಜಿಲ್ಲಾಧಿಕಾರಿ ಕೆ.ಪಿ.ಮೋಹನ್‌ರಾಜ್ ಮತ್ತಿತರರು ಇದ್ದರು.

> ಮುಂದಿನ 5 ವರ್ಷದಲ್ಲಿ ರೈತರ ಆದಾಯ ದ್ವಿಗುಣಗೊಳಿಸುವ ಗುರಿಯನ್ನು ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದೆ. ವೃದ್ಧಾಶ್ರಮಗಳಾಗುತ್ತಿರುವ ಹಳ್ಳಿಗಳಲ್ಲಿರುವ ಯುವಕರಿಗೆ ಕೃಷಿಯನ್ನು ಲಾಭದಾಯಕವಾಗಿ ಮಾಡಬಹುದು ಎಂಬುದನ್ನು ತೋರಿಸಿ, ವಿಶ್ವಾಸ ಮೂಡಿಸಲು 'ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ' ಕಾರ್ಯಕ್ರಮವನ್ನು ತಿಪಟೂರು ತಾಲೂಕು ಕೊಪ್ಪಾ ಮತ್ತು ಹುಲ್‌ಕಟ್ಟೆ ಗ್ರಾಮದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ.
>
> | ಪ್ರಕಾಶ್‌ಕಮ್ಮರಡಿ ರಾಜ್ಯ ಬೆಲೆ ಆಯೋಗ ಅಧ್ಯಕ್ಷ

> ಜಿಲ್ಲೆಯ ಜನ ತೆಂಗಿನೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದಾರೆ. ಮನೆಯಲ್ಲಿ ಕೊಬ್ಬರಿ ಸುಲಿದರೆ ತೃಪ್ತಿ. ಲಾಭಸಿಕ್ಕರೂ ಕಾಯಿ, ಎಳನೀರು ಮಾರುವುದನ್ನು ಒಪ್ಪುವುದಿಲ್ಲ. ಹಾಗಾಗಿ, ನಿಮ್ಮ ಯಾವುದೇ ಕಾರ್ಯಕ್ರಮವಾದರೂ ತೆಂಗಿಗೆ ಪೂರಕವಾಗಿರಬೇಕು.
>
> | ನಾಗೇಶ್ ಬೆಲೆ ಕಾವಲು ಸಮಿತಿ ಸದಸ್ಯ

ತಿಪಟೂರು ತಾಲೂಕಿನ ಹೇಮಾವತಿ ನೀರು ಬರುವ ಜಾಗದಲ್ಲಿ ಸಿರಿಧಾನ್ಯ ಬೆಳೆಯುವುದು ಕಷ್ಟ ತರಕಾರಿ, ಹೂ ಬೆಳೆಯುವ ಬಗ್ಗೆ ಯೋಚಿಸಬಹುದು. ಕೃಷಿ ಸಾಕಣೆ ಜತೆಗೆ ತೆಂಗಿಗೆ ಪೂರಕವಾದ ಸಣ್ಣ ಕೈಗಾರಿಕೆಗಳ ಬಗ್ಗೆ ರೈತರಿಗೆ ತಿಳಿಸಬೇಕು ಎಂದು ಸಭೆಯಲ್ಲಿ ಹಾಜರಿದ್ದ ಬೆಲೆಕಾವಲು ಸಮಿತಿ ಕಾರ್ಯದರ್ಶಿ ಶ್ರೀಕಾಂತ್ ಸಲಹೆ ನೀಡಿದರು.

ರೈತಪರ ಚಿಂತಕ ಅಣೇಕಟ್ಟೆ ವಿಶ್ವನಾಥ್ ಮಾತನಾಡಿ, ರೈತರ ಕಲ್ಯಾಣಕ್ಕಾಗಿ ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸಿದೆ. ಅನುಷ್ಠಾನವಾಗಿ ಹಣ ಪಡೆದ ನಂತರ ಅಲ್ಲಿ ಯಾವುದೇ ಕುರುಹುಗಳಿರುವುದಿಲ್ಲ. ಇಲ್ಲಿನ ವಿಫಲತೆ ಪಾಠವಾಗಿಟ್ಟುಕೊಂಡು ಚಿಂತಿಸಿದರೆ ಯಶಸ್ಸು ಸಿಗಬಹುದು ಎಂದರು. ಬೆಲೆ ಕಾವಲು ಸಮಿತಿ ರಾಜ್ಯಾಧ್ಯಕ್ಷ ಎಸ್. ಗಂಗಾಧರಯ್ಯ, ರೈತ ಮುಖಂಡ ಹನುಮಂತೇಗೌಡ, ಕೃಷಿ ವಿವಿ ವಿಸ್ತರಣಾ ನಿರ್ದೇಶಕ ಡಾ.ಜಗದೀಶ್, ಮಾಜಿ ನಿರ್ದೇಶಕ ಡಾ.ಪ್ರಭಾಕರ ರೆಡ್ಡಿ, ಕೃಷಿ ವಿಜ್ಞಾನಿ ಡಾ.ಬೆಂಡಿ ಸೇರಿದಂತೆ ಕೃಷಿ, ತೋಟಗಾರಿಕೆ, ಎಪಿಎಂಸಿ, ಸಾಮಾಜಿಕ ಅರಣ್ಯ, ಮೀನುಗಾರಿಕೆ ಮತ್ತಿತರರು ಇಲಾಖೆ ಮುಖ್ಯಸ್ಥರು ಇದ್ದರು.

# ರೈತರ ಜತೆ ಅಧ್ಯಕ್ಷರ ಮಾತುಕ

■ ವಿಜಯವಾಣಿ ಸುದ್ದಿಜಾಲ ತಿಪಟೂರು

ರಾಜ್ಯ ರೈತ ಸಂಘ, ಹಸಿರು ಸೇನೆ ಕೊಬ್ಬರಿ ಬೆಂಬಲ ಬೆಲೆ ಆಗ್ರಹಿಸಿ

» ರಾಜ್ಯ ರೈತ ಸಂಘ, ಹಸಿರು ಸೇನೆ ಪ್ರತಿಭಟನೆ 16ನೇ ದಿನಕ್ಕೆ

» ಕೊಬ್ಬರಿಗೆ ಬೆಂಬಲ ಬೆಲೆ ನೀಡಲು ಆಗ್ರಹ

ರೈತ ಭವನ ಮುಂಭಾಗ ನಡೆಸು ಅನಿರ್ದಿಷ್ಟಾವಧಿ ಧರಣಿ 16ನೇ ದಿನಕ್ಕೆ ಕಾ ರಾಜ್ಯ ಬೆಲೆ ಆಯೋಗದ ಅಧ್ಯಕ್ಷ ಕಮ್ಮರಡಿ ಭೇಟಿ ನೀಡಿ ರೈತರ ಬೇಡಿಕೆ ಸಮಾಲೋಚನೆ ನಡೆಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ತಿ ಶಂಕರಣ್ಣ, ತಾಲೂಕು ಅಧ್ಯಕ್ಷ ಯೋಗೀಶ್ವರ ತಾಲೂಕು ಕಾರ್ಯದರ್ಶಿ ಸಿದ್ಲೇಹಳ್ಳಿ ನೊಣವಿನಕೆರೆ ಹೋಬಳಿ ಅಧ್ಯಕ್ಷ ಅ ಗಂಗಾಧರ್, ಗೌಡನಕಟ್ಟೆ ಚೇತನ್ ಇದ್ದರು

ವಿಜಯವಾಣಿ ಚಿತ್ರ



ತಿಪಟೂರಿನ ರೈತ ಭವನ ಮುಂಭಾಗ ಧರಣಿ ನಿರತ ರೈತರೊಂದಿಗೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಚರ್ಚಿಸಿದರು.

ಪ್ರಜಾವಾಣಿ

ಬುಧವಾರ • ಡಿಸೆಂಬರ್ 21, 2016

# ಧರಣಿಗೆ ತಾಲ್ಲೂಕು ಕೃಷಿಕ ಸಮಾಜ ಬೆಂಬಲ

ಪ್ರಜಾವಾಣಿ ವಾರ್ತೆ

ಹುಳಿಯಾರು: ಕೊಬ್ಬರಿ ಬೆಂಬಲ ಬೆಲೆಗೆ ಒತ್ತಾಯಿಸಿ ರಾಜ್ಯ ರೈತಸಂಘದ ವತಿಯಿಂದ ಪಟ್ಟಣದ ಎಪಿಎಂಸಿಯಲ್ಲಿ ನಡೆಸುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಮಂಗಳವಾರ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೃಷಿಕ ಸಮಾಜದ ಪದಾಧಿಕಾರಿಗಳು ಬೆಂಬಲ ಸೂಚಿಸಿ ಧರಣಿಯಲ್ಲಿ ಪಾಲ್ಗೊಂಡಿದ್ದರು.

ಕೊಬ್ಬರಿಗೆ ಬೆಲೆ ಹೆಚ್ಚಳಕ್ಕೆ ಪಟ್ಟಣದ ಎಪಿಎಂಸಿ ಯಲ್ಲಿ ನಡೆಯುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಮಂಗಳವಾರ 40ನೇ ದಿನಕ್ಕೆ ಕಾಲಿಟ್ಟಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೃಷಿಕ ಸಮಾಜದ ಪದಾಧಿಕಾರಿಗಳು ಬೆಂಬಲ ಸೂಚಿಸಿ ಧರಣಿಯಲ್ಲಿ ಪಾಲ್ಗೊಂಡು ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

ತುಮಕೂರು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಬಿ.ಎನ್.ಲೋಕೇಶ್ ಮಾತನಾಡಿ, ರೈತರು ತೀವ್ರ ಸಂಕಷ್ಟ ಕ್ಕೊಳಗಾದಾಗ ಸರ್ಕಾರಗಳು ಸ್ಪಂದಿಸ ಬೇಕು. ಆದರೆ ಅವರನ್ನು ಹೋರಾಟದ ಹಂತಕ್ಕೆ ಕೊಂಡೊಯ್ಯುವುದು ಸರಿಯಾದ ಕ್ರಮವಲ್ಲ. ರೈತರ ಹೋರಾಟಕ್ಕೆ ಕೃಷಿಕ ಸಮಾಜ ಸದಾ ಬೆನ್ನಲುಬು ಆಗಿರುತ್ತದೆ. ಕಳೆದ 40 ದಿನಗಳಿಂದ ರೈತ ಸಂಘದ ಪದಾಧಿಕಾರಿಗಳು ಹೋರಾಟ ಮಾಡುತ್ತಿರುವುದು ಸವಾಲಿನ ಕೆಲಸವಾಗಿದೆ. ಹೋರಾಟಗಾರರ ಆತ್ಮಸ್ಥೈರ್ಯ ಮೆಚ್ಚಲೇಬೇಕು ಎಂದರು.

ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಟಿ.ಎಲ್.ನಟರಾಜು, ಉಪಾಧ್ಯಕ್ಷ ಬಿ.ಸಿ.ನಾಗರಾಜಪ್ಪ, ನಿರ್ದೇಶಕರಾದ ಮಲ್ಲಿಕಾರ್ಜುನಯ್ಯ, ಶಂಕರಪ್ಪ, ವಿಶ್ವನಾಥ್, ದೊಡ್ಡರಂಗಪ್ಪ, ವೆಂಕಟೇಶ್, ಶೈಲಜಾ, ತಾಲ್ಲೂಕು ಸಹಾಯಕ ಕೃಷಿ ಸಹಾಯಕ ನಿರ್ದೇಶಕ ಎಚ್.ಹೊನ್ನದಾಸೇಗೌಡ, ಸಹಾಯಕ ಕೃಷಿ ಅಧಿಕಾರಿ ಕರಿಬಸವಯ್ಯ ಇತರರು ಇದ್ದರು. ರೈತಸಂಘದ ಕೆಂಕೆರೆ ಸತೀಶ್, ತಿಮ್ಮನಹಳ್ಳಿ ಲೋಕಣ್ಣ, ಶಿವಣ್ಣ, ತಮ್ಮಡಿಹಳ್ಳಿ ಓಂಕಾರಮೂರ್ತಿ ಇದ್ದರು.

**ಶಿಲ್ಪಿಗಳಿಂದ ಬೆಂಬಲ:** ಕೊಬ್ಬರಿ ಬೆಂಬಲ ಬೆಲೆಗೆ ಒತ್ತಾಯಿಸಿ ರಾಜ್ಯ ರೈತಸಂಘದ ವತಿಯಿಂದ ಪಟ್ಟಣದ ಎಪಿಎಂಸಿಯಲ್ಲಿ ನಡೆಸುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಮಂಗಳವಾರ ಚಿಕ್ಕನಾಯಕನಹಳ್ಳಿಯ ಶಿಲ್ಪಕಲಾ ಸಂಘದ ಪದಾಧಿಕಾರಿಗಳು ಬೆಂಬಲ ನೀಡಿದರು.

ಶಿಲ್ಪಿ ಸಿ.ಪಿ.ವಿಶ್ವನಾಥ್ ಹೋರಾಟದ ಸ್ಥಳದಲ್ಲಿಯೇ ಶಿಲ್ಪಗಳನ್ನು ಕೆತ್ತುವ ಮೂಲಕ ಪ್ರತಿಭಟನೆಗೆ ಬೆಂಬಲ ಸೂಚಿಸಿದರು. ಕರವೇ ತಾಲ್ಲೂಕು ಘಟಕದ ಅಧ್ಯಕ್ಷ ಸಿ.ಟಿ.ಗುರುಮೂರ್ತಿ ಸೇರಿದಂತೆ ಇತರರು ಹಾಜರಿದ್ದರು.






ಹುಳಿಯಾರು ಎಪಿಎಂಸಿಯಲ್ಲಿ ಕೊಬ್ಬರಿ ಬೆಂಬಲ ಬೆಲೆಗೆ ಒತ್ತಾಯಿಸಿ ರಾಜ್ಯ ರೈತ ಸಂಘದ ವತಿಯಿಂದ ನಡೆಸುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಮಂಗಳವಾರ ತಾಲ್ಲೂಕು ಕೃಷಿಕ ಸಮಾಜದ ಪದಾಧಿಕಾರಿಗಳು ಬೆಂಬಲ ಸೂಚಿಸಿ ಧರಣಿಯಲ್ಲಿ ಪಾಲ್ಗೊಂಡಿದ್ದರು (ಎಡಚಿತ್ರ). ತಿಪಟೂರು ಎಪಿಎಂಸಿ ಎದುರು ಕೊಬ್ಬರಿಗೆ ಬೆಂಬಲ ಬೆಲೆ ಮತ್ತು ಪ್ರೋತ್ಸಾಹ ಧನ ಹೆಚ್ಚಿಸುವಂತೆ ಒತ್ತಾಯಿಸಿ ರೈತ ಸಂಘದಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿಯಲ್ಲಿ ರಾಜ್ಯ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಮಂಗಳವಾರ ಪಾಲ್ಗೊಂಡು ರೈತರ ಅಹವಾಲು ಆಲಿಸಿದರು. ಮುಖಂಡರಾದ ಯೋಗೀಶ್ವರಸ್ವಾಮಿ, ಗಂಗಾಧರ್, ಎಸ್. ಗಂಗಾಧರಯ್ಯ ಮತ್ತಿತರರು ಇದ್ದರು